ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	253 (302)
ಉತ್ತರಿಸಬೇಕಾದ ದಿನಾಂಕ	14.09.2021 (ಮಾನ್ಯ ಪೌರಾಡಳಿತ ಸಚಿವರನ್ನುದ್ದೇಶಿಸಿ ಈ ಪ್ರಶ್ನೆಗೆ ಉತ್ತರಿಸಲು ಮಾನ್ಯ ಸದಸ್ಯರು ಕೋರಿದ್ದು, ಈ ಪ್ರಶ್ನೆಯು ನಗರಾಭಿವೃದ್ಧಿ ಇಲಾಖೆಯಿಂದ ವಸತಿ ಇಲಾಖೆಗೆ ವರ್ಗಾವಣೆಗೊಂಡಿದೆ)
ಉತ್ತರಿಸುವ ಸಚಿವರು	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅನು ಕ್ರಮ	ಪ್ರಶ್ನೆ	ಉತ್ತರ
ಅ	ಕೊಡಗು ಜಿಲ್ಲೆಯಲ್ಲಿನ ನಗರ ಸ್ಥಳೀಯ ಸಂಸ್ಥೆ (ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ) ಗಳಲ್ಲಿ ನಿವೇಶನ ರಹಿತರು ಹಾಗೂ ವಸತಿರಹಿತರ ಪಟ್ಟಿ ಮಾಡಲಾಗಿದೆಯೇ;	ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿ 2016-17 ಮತ್ತು 2017-18ನೇ ಸಾಲಿನಲ್ಲಿ ನಗರ ಪ್ರದೇಶಗಳಲ್ಲಿ ಬೇಡಿಕೆ ಸಮೀಕ್ಷೆ ಕೈಗೊಳ್ಳಲಾಗಿತ್ತು. ಅದರಂತೆ, ಕೊಡಗು ಜಿಲ್ಲೆಯಲ್ಲಿ 1,633 ವಸತಿರಹಿತ ಕುಟುಂಬಗಳು ಮತ್ತು 3,124 ನಿವೇಶನರಹಿತ ಕುಟುಂಬಗಳನ್ನು ಗುರುತಿಸಲಾಗಿದೆ.
ಆ	ಪಟ್ಟಿ ಮಾಡಿದ್ದಲ್ಲಿ, ಈ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಇರುವ ನಿವೇಶನ ರಹಿತರು ಹಾಗೂ ವಸತಿರಹಿತರ ಸಂಖ್ಯೆ ಎಷ್ಟು;	ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆವಾರು ವಸತಿರಹಿತರು ಮತ್ತು ನಿವೇಶನರಹಿತರ ವಿವರಗಳು (ಸಂಖ್ಯೆಯು) ಈ ಕೆಳಕಂಡಂತಿವೆ:-

ನಗರ ಸ್ಥಳೀಯ ಸಂಸ್ಥೆಯ ಹೆಸರು	ನಿವೇಶನ ರಹಿತರು	ವಸತಿ ರಹಿತರು	ನಿವೇಶನರಹಿತರು + ವಸತಿರಹಿತರು
ಕುಶಾಲನಗರ	610	446	1,056
ಮಡಿಕೇರಿ	1,680	435	2,115
ಸೋಮವಾರಪೇಟೆ	339	278	617
ವಿರಾಜಪೇಟೆ	495	474	969
ಒಟ್ಟು:	**3,124**	**1,633**	**4,757**

ಅನು ಕ್ರಮ	ಪ್ರಶ್ನೆ	ಉತ್ತರ
ಇ	ಜಿಲ್ಲೆಯಲ್ಲಿನ ನಗರ ಸ್ಥಳೀಯ ಸಂಸ್ಥೆ (ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ) ಗಳಲ್ಲಿ ಎಷ್ಟು ಜನ ನಿವೇಶನರಹಿತರು ಹಾಗೂ ವಸತಿರಹಿತರಿಗೆ ಸರ್ಕಾರ ಕಳೆದ ವರ್ಷ ನಿವೇಶನ ಮತ್ತು ವಸತಿ ಒದಗಿಸಿದೆಯೇ;	2020-21ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿ ವಸತಿ ಸೌಲಭ್ಯ ಕೋರಿ ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಂದ ಯಾವುದೇ ಪ್ರಸ್ತಾವನೆಗಳು ಸ್ವೀಕೃತಗೊಂಡಿರುವುದಿಲ್ಲ. ಅರ್ಹ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಲು ಜಿಲ್ಲಾಧಿಕಾರಿಗಳು ಸಲ್ಲಿಸುವ ಪ್ರಸ್ತಾವನೆಯನ್ನಾಧರಿಸಿ, ವಸತಿ ಇಲಾಖೆಯ ಪರಿವ್ಯಾಪ್ತಿಯಲ್ಲಿನ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಹಕ್ಕುಪತ್ರ ನೀಡಲಾಗುತ್ತಿದ್ದು, ಕಳೆದ ವರ್ಷ ಅಂದರೆ, 2020-21ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳಿಂದ ಯಾವುದೇ ಹಕ್ಕುಪತ್ರ ಸಂಬಂಧದ ಪ್ರಸ್ತಾವನೆ ಸ್ವೀಕೃತವಾಗದ ಕಾರಣ, ಕೊಡಗು ಜಿಲ್ಲೆಯ ಯಾವುದೇ ನಗರ ಸ್ಥಳೀಯ ಸಂಸ್ಥೆಗಳ ಫಲಾನುಭವಿಗಳಿಗೆ ಸದರಿ ನಿಗಮದಿಂದ ಹಕ್ಕುಪತ್ರ ನೀಡಿರುವುದಿಲ್ಲ.
ಈ	ಉಳಿದ ಎಲ್ಲಾ ನಿವೇಶನರಹಿತರು ಹಾಗೂ ವಸತಿರಹಿತರಿಗೆ ನಿವೇಶನ ಮತ್ತು ವಸತಿ ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು?	ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿ ಕೇಂದ್ರ ಸರ್ಕಾರವು ಯಾವುದೇ ಭೌತಿಕ ಗುರಿಯ ಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಈಗಾಗಲೇ ನಿವೇಶನ ಹೊಂದಿರುವ ಕುಟುಂಬಗಳು ಕೇಂದ್ರ ಸರ್ಕಾರದ ರೂ. 1.50 ಲಕ್ಷ ಸಹಾಯಧನ ಪಡೆದುಕೊಂಡು ಸ್ವತಃ ತಾವೇ ಮನೆಗಳನ್ನು ನಿರ್ಮಿಸಿಕೊಳ್ಳಲು ಮುಂದೆ ಬಂದಲ್ಲಿ, ಅಂತಹ ಎಲ್ಲಾ ಕುಟುಂಬಗಳಿಗೂ ಸದರಿ ಯೋಜನೆಯಡಿಯ ಬಿ.ಎಲ್.ಸಿ. ಘಟಕದಡಿ ಮನೆ ನಿರ್ಮಿಸಿಕೊಳ್ಳಲು ಅವಕಾಶವಿರುತ್ತದೆ.

ಅನು ಕ್ರಮ	ಪ್ರಶ್ನೆ	ಉತ್ತರ

ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿಯ ಎ.ಎಚ್.ಪಿ. ಘಟಕದಡಿ ನಗರ ಪ್ರದೇಶದ ನಿವೇಶನರಹಿತ ಕುಟುಂಬಗಳಿಗೆ ಸರ್ಕಾರದ ಜಮೀನುಗಳನ್ನು ಗುರುತಿಸಿ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಸ್ವೀಕೃತಗೊಂಡಲ್ಲಿ, ಬಹುಮಹಡಿ ಮಾದರಿಯಲ್ಲಿ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲು ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ವಹಿಸಲಾಗುತ್ತಿದೆ.

2021-22ನೇ ಸಾಲಿನಲ್ಲಿ ರಾಜ್ಯ ಪುರಸ್ಕೃತ ಯೋಜನೆಯಡಿ 1 ಲಕ್ಷ ಮನೆಗಳ ಗುರಿಯನ್ನು ನಿಗಧಿಪಡಿಸಲಾಗಿದೆ. ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) ಯೋಜನೆಯಡಿ ಕೇಂದ್ರ ಸರ್ಕಾರದಿಂದ ಪರಿಷ್ಕೃತ ಗುರಿಯನ್ನು ನಿರೀಕ್ಷಿಸಲಾಗಿದೆ. ಸದರಿ ಗುರಿಯನ್ನು ಯೋಜನಾವಾರು / ವಿಧಾನ ಸಭಾ ಕ್ಷೇತ್ರವಾರು ಹಂಚಿಕೆ ಮಾಡಲು ಕ್ರಮವಹಿಸಲಾಗುತ್ತಿದೆ.

ಅರ್ಹ ನಿವೇಶನರಹಿತ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಲು ಗ್ರಾಮೀಣ ಪ್ರದೇಶದಲ್ಲಿ ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ ಮತ್ತು ನಗರ ಪ್ರದೇಶದಲ್ಲಿ ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆ ಜಾರಿಯಲ್ಲಿದ್ದು, ಈ ಯೋಜನೆಗಳಡಿ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದೆ. ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ವಸತಿಗೆ ಸೂಕ್ತ ಖಾಸಗಿ ಜಮೀನು ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಜಮೀನು ಖರೀದಿ ಸಮಿತಿಯನ್ನು ರಚಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 33 ಹೆಚ್.ಎ.ಹೆಚ್. 2016, ದಿನಾಂಕ: 12.07.2016 ಮತ್ತು 20.04.2017 ರಲ್ಲಿ ಜಮೀನು ಖರೀದಿ ದರಗಳನ್ನು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ:-

(ರೂ. ಲಕ್ಷಗಳಲ್ಲಿ)

ಪ್ರದೇಶ	ಗರಿಷ್ಟ ಮಿತಿ (ಪ್ರತಿ ಎಕರೆಗೆ)
ಗ್ರಾಮೀಣ ಪ್ರದೇಶ	9.00
ಪಟ್ಟಣ ಪಂಚಾಯಿತಿ	12.00
ಪುರಸಭೆ	15.00
ನಗರಸಭೆ	22.50
ಮಹಾನಗರ ಪಾಲಿಕೆ	37.50
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ	75.00

ಹೀಗೆ ಮೇಲ್ಕಂಡ ನಿವೇಶನ ಯೋಜನೆಗಳಡಿ ಮಂಜೂರಾದ ಸರ್ಕಾರಿ / ಖರೀದಿಸಲಾದ ಖಾಸಗಿ ಜಮೀನನ್ನು ಬಳಸಿಕೊಂಡು, ಅರ್ಹ ನಿವೇಶನರಹಿತ ಕುಟುಂಬಗಳಿಗೆ ಹಂತ ಹಂತವಾಗಿ ನಿವೇಶನ / ವಸತಿ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗುತ್ತಿದೆ.

[ಸಂಖ್ಯೆ: ವಇ 153 ಹೆಚ್ಎಫ್ಎ 2021]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು.